
ಎಂಬ ಅಧಿಕಾರಿಯ ಮೂಲಕ 1791ರಲ್ಲಿ ವಿಲಿಯಂ ಜೋನ್ಸ್‌ಗೆ ತಲುಪಿ, ಅದು ಏಷ್ಯಾಟಿಕ್ ರಿಸರ್ಚಸ್ ಪತ್ರಿಕೆಯ ಮೂರನೆಯ ಸಂಚಿಕೆಯಲ್ಲಿ ಪ್ರಕಟವಾಗುವುದರೊಂದಿಗೆ ಆರಂಭವಾದ ಕನ್ನಡ ಶಾಸನಗಳ ಅಧ್ಯಯನ, ನಂತರ ಸರ್ ವಾಲ್ಟರ್ ಎಲಿಯಟ್, ಜೆ. ಬರ್ಗೆಸ್, ಜೆ.ಎಫ್. ಫ್ಲೀಟ್, ಬಿ.ಎಲ್. ರೈಸ್ ಮುಂತಾದ ಪಾಶ್ಚಾತ್ಯ ಮತ್ತು ಕವೆಲ್ಲಿ ಬೋರಯ್ಯ ಮತ್ತು ಸಹೋದರರು, ಎಂ.ಎಚ್. ಕೃಷ್ಣ, ಆರ್. ನರಸಿಂಹಾಚಾರ್, ಎಚ್. ಕೃಷ್ಣಶಾಸ್ತ್ರಿ, ಎನ್. ಲಕ್ಷ್ಮೀನಾರಾಯಣ ರಾವ್, ಡಿ.ಸಿ. ಸರ್ಕಾರ್, ತಿ.ತಾ. ಶರ್ಮ, ಪಿ.ಬಿ. ದೇಸಾಯಿ. ಆರ್.ಎಸ್. ಪಂಚಮುಖಿ ಮುಂತಾದ ಹಿರಿಯರು ಮತ್ತು ನಂತರದ ಪೀಳಿಗೆಯವರು ಮುಂದುವರಿಸಿಕೊಂಡು ಬಂದಿದ್ದಾರೆ. ಕೇಂದ್ರ ಪುರಾತತ್ವ ಇಲಾಖೆಯಲ್ಲಿ ಶಾಸನಗಳ ಅಧ್ಯಯನಕ್ಕೆಂದೇ ಪ್ರತ್ಯೇಕ ವಿಭಾಗವಿದೆ. ಅದು ಈವರೆಗೂ ಒಳ್ಳೆಯ ಮತ್ತು ಮಹತ್ವದ ಕೆಲಸಗಳನ್ನು ಮಾಡಿಕೊಂಡು, ಪ್ರಕಟಣೆಗಳನ್ನೂ ಹೊರತರುತ್ತಿದೆ. ಸರ್ಕಾರ ಮಾತ್ರವಲ್ಲದೆ, ಕೆಲವು ವಿಶ್ವವಿದ್ಯಾಲಯಗಳೂ ಶಾಸನಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಿವೆ.

ಶಾಸನ ಶೋಧದ ನಂತರ ಅವುಗಳ ಪಾಠದ ಪ್ರಕಟಣೆ, ಶಾಸನವಿರುವ ಶಿಲೆ ಅಥವಾ ಲೋಹದ ಸ್ವರೂಪ, ಲೋಪಗಳು, ಲಿಪಿ ಮತ್ತು ಭಾಷಾ ಸ್ವರೂಪದ ವೈಶಿಷ್ಟ್ಯ, ಕಾಲ ಇತ್ಯಾದಿ ವಿಷಯಗಳನ್ನು ಶಾಸನದಿಂದ ಪ್ರಮುಖವಾಗಿ ತಿಳಿಯುವ ರಾಜಕೀಯ ವಿಚಾರಗಳು, ಸ್ವಲ್ಪಮಟ್ಟಿನ ಸಾಂಸ್ಕೃತಿಕ ಮತ್ತು ಸಾಹಿತ್ಯದ ವಿಶೇಷಗಳನ್ನು ಕುರಿತು ಸಾಧ್ಯವಾದ ಮಟ್ಟಿನ ವಿಶ್ಲೇಷಣೆಗೆ ಅವಕಾಶ ಮಾಡಿಕೊಳ್ಳಲಾಗುತ್ತದೆ.

'ಎಪಿಗ್ರಾಫಿಯಾ ಕರ್ನಾಟಿಕಾ'ದಲ್ಲಿ ಸಂಪಾದಿತವಾಗಿರುವ ಶಾಸನಗಳ ಸ್ವರೂಪಕ್ಕೂ, 'ಎಪಿಗ್ರಾಫಿಯಾ ಇಂಡಿಕಾ'ದಲ್ಲಿ ಸಂಪಾದಿತವಾಗಿರುವ ಶಾಸನಗಳ ಸ್ವರೂಪಕ್ಕೂ ವ್ಯತ್ಯಾಸಗಳನ್ನು ಕಾಣಬಹುದು. ಅಲ್ಲಿಯ ವಿಧಾನವೇ ಬೇರೆ, ಇಲ್ಲಿಯ ವಿಧಾನವೇ ಬೇರೆ. ಒಂದೇ ಶಾಸನವು ಸಂಪಾದಿತವಾಗಿರುವ ಬೇರೆಬೇರೆ ಕ್ರಮಗಳನ್ನು ಗಮನಿಸಬಹುದು. ಹಾಗೆಯೇ, ಭಾರತೀಯ ಪುರಾತತ್ವ ಇಲಾಖೆಯ ಶಾಸನ ವಿಭಾಗವು




**ಮೊದಲ ಸಹಸ್ರಮಾನದ ಕನ್ನಡ ಶಾಸನಗಳು**
(8 ಸಂಪುಟಗಳು)
ಲೇ: ಷ. ಶೆಟ್ಟರ್, ಒಟ್ಟು ಪುಟಗಳು: 4,270
ಬೆಲೆ: ರೂ.8,000 (ಹಾರ್ಡ್ ಬೌಂಡ್) ಹಾಗೂ 2,560 (ಸಾದಾ ಪ್ರತಿ)
ಪ್ರ: ಅಭಿನವ, ನಂ. 17/18–2, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು – 560 040

ಪ್ರಕಟಿಸುವ 'ಎಪಿಗ್ರಾಫಿಯಾ ಇಂಡಿಕಾ' ಮತ್ತು ದಕ್ಷಿಣ ಬಾರತದ ಶಾಸನಗಳ ಸ್ವರೂಪವೂ ಭಿನ್ನ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿರುವ ಪದ್ಧತಿಯಲ್ಲೂ ವ್ಯತ್ಯಾಸಗಳನ್ನು ಗುರುತಿಸಬಹುದು. ಒಂದೇ ಶಾಸನದ ಒಂದೇ ಪಠ್ಯವು ವಿಭಿನ್ನ ಸ್ವರೂಪಗಳಲ್ಲಿ ಪ್ರಕಟಗೊಂಡಿರುವುದನ್ನು ಕಂಡಾಗ ಹೀಗೇಕೆ ಎಂಬ ಪ್ರಶ್ನೆಗೆ ಅವಕಾಶಗಳಿವೆಯಾದರೂ, ಆ ಕ್ರಮವು ಆಯಾ ಸಂಪಾದಕರು ಅನುಸರಿಸಿದ ಮಾದರಿಯನ್ನು ಅಭಿವ್ಯಕ್ತಿಸುತ್ತವೆ. 'ಎಪಿಗ್ರಾಫಿಯಾ ಕರ್ನಾಟಿಕಾ'ದಲ್ಲಿ ಶಾಸನಗಳ ಪಠ್ಯದ ಕ್ವಚಿತ್ ಪಾಠಕ್ಕೆ ಇಂಗ್ಲಿಷ್ (ರೋಮನ್) ಲಿಪ್ಯಂತರವನ್ನು ಹೆಚ್ಚಾಗಿ ಅವಲಂಬಿಸುವ ಅಥವಾ ನಂಬುವ ವಿದ್ವಾಂಸರು ಇದ್ದಾರೆ. ಪಠ್ಯವು ಇಂಗ್ಲಿಷ್ ಲಿಪ್ಯಂತರದ ಭಾಗಗಳಲ್ಲಿ ಸರಿಯಾಗಿರುತ್ತದೆ ಎಂಬುದು ಅವರ ತಿಳಿವಳಿಕೆ.